ಓ.ಎಸ್. ನಂ. 19/2015
ಪಿ.ಡಬ್ಲ್ಯೂ- 4

(ಇಂದು ದಿಃ 29-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

ಪಾಟೀ ಸವಾಲು **:- ಶ್ರೀ. HSR** ವಕೀಲರಿಂದ **:-**

ಶಾಮಮ್ಮ ನನಗೆ ಪರಿಚಯ. ಅವಳು ತೀರಿಹೋಗಿ 5 ವರ್ಷ ಅಗಿದೆ. ಶಾಮಮ್ಮಳಿಗೆ ಮೊಗಲಪ್ಪ ಮತ್ತು ಯಲ್ಲಪ್ಪ ಇಬ್ಬರು ಮಕ್ಕಳು. ಮೊಗಲಪ್ಪ ತೀರಿಹೋಗಿ 3 ವರ್ಷ ಆಗಿದೆ. ಮೊಗಲಪ್ಪನಿಗೆ 3 ಜನ ಮಕ್ಕಳು. ಅವುರುಗಳೆಂದರೆ ಬಸ್ಸಪ್ಪ, ಆಶಪ್ಪ ಮತ್ತು ಶಂಕರಪ್ಪ. ಮೊಗಲಪ್ಪನಿಗೆ 3 ಜನ ಹೆಣ್ಣು ಮಕ್ಕಳು ಅವರ ಹೆಸರುಗಳು ನನಗೆ ಗೊತ್ತಿಲ್ಲ. ಯಲ್ಲಪ್ಪನಿಗೆ 3 ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು. ಮೊಗಲಪ್ಪನ ಹೆಂಡತಿ ಬದುಕಿದ್ದಾರೆ. ಯಲ್ಲಪ್ಪನ ಹೆಂಡತಿ ಕೂಡ ಇದ್ದಾರೆ. ನನ್ನನ್ನು 20 ವರ್ಷಗಳ ಹಿಂದೆ ಮೊಗಲಪ್ಪ ದಾವಾ ಜಮೀನಿನಲ್ಲಿ ಕೆಲಸಕ್ಕೆ ಕರೆದುಕೊಂಡು ಹೋಗಿದ್ದ. ಸದರಿ ಜಮೀನು ಸಿಲಾರಕೋಟ ಸೀಮೆ ಯಲ್ಲಿ ಬರುತ್ತದೆ. ಸದರಿ ಜಮೀನಿನ ವಿಸ್ತೀರ್ಣ ಮತ್ತು ಚೆಕಬಂದಿ  ನನಗೆ ಗೊತ್ತಿಲ್ಲ. ಸದರಿ ಜಮೀನಿನ ಸರ್ವೆ ನಂಬರ ಗೊತ್ತಿಲ್ಲ. ಎಷ್ಟು ಸರ್ವೆ ನಂಬರಗಳು ಇವೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ದಾಖಲಾತಿಗಳನ್ನು ನಾನು ನೋಡಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಾನು ದಾವಾ ಸ್ವತ್ತುಗಳ ದಾಖಾತಿಗಳನ್ನು ನೋಡಿದ್ದೇನೆ ಎಂದು ಉಲ್ಲೇಖ ಇದೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ಮೊಗಲಪ್ಪ ನನ್ನನ್ನು ಕೆಲಸಕ್ಕೆ ಕರೆದುಕೊಂಡು ಹೋಗಿದ್ದ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ದಾವಾ ಜಮೀನುಗಳನ್ನು ನೋಡಿಲ್ಲ ಎಂದರೆ ಸರಿಯಲ್ಲ. ನಾನು ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿ ತೆಲುಗು ಭಾಷಿಕರಾಗಿದ್ದ ಕಾರಣ ಶ್ರೀ. NM ವಕೀಲರನ್ನು ಭಾಷಾಂತಕಾರರನ್ನಾಗಿ ನೇಮಕ ಮಾಡಿಕೊಂಡು ಕನ್ನಡದಲ್ಲಿ ಸಾಕ್ಷಿ ದಾಖಲುಮಾಡಿಕೊಳ್ಳಲಾಗಿದೆ.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಸೇಡಂ.